ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/05/ಇಎಸ್‌ಟಿ(12)/2021

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001.
ದಿನಾಂಕ:23.12.2021.

**ಸುತ್ತೋಲೆ**

**ವಿಷಯ:** 2020-21ನೇ ಹಾಗೂ 2021ನೇ ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ:ಸಿಆಸುಇ/124/ಕತವ/2019 ದಿ:18.08.2020.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/05/ಪಿಎಂಎಸ್/2021 ದಿ:21.01.2021.

********

ಉಲ್ಲೇಖ(1)ರ ಸರ್ಕಾರದ ಅನಧಿಕೃತ ಟಿಪ್ಪಣಿ ಪತ್ರದಲ್ಲಿ ಗ್ರೂಪ್-ಎ, ಬಿ, & ಸಿ ವೃಂದದ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಗಳನ್ನು E-PRS(e-Performance Reporting System)ನಲ್ಲಿ ಆನ್-ಲೈನ್ ಮೂಲಕ ಸಲ್ಲಿಸಲು ತಿಳಿಸಲಾಗಿದೆ.ಆದರೆ ಆಸ್ತಿ ಹಾಗೂ ಹೊಣೆಗಾರಿಕೆ ಪಟ್ಟಿಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಉಲ್ಲೇಖ(2)ರಲ್ಲಿ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು 2021ನ್ನು ಜಾರಿಗೆ ತಂದಿರುವ ಬಗ್ಗೆ ಆಸ್ತಿ ಹಾಗೂ ಹೋಣೆಗಾರಿಕೆ ವಿವರಗಳನ್ನು ಎಲ್ಲಾ ಅಧಿಕಾರಿ ವೃಂದದವರು (ಎ/ಬಿ/ಸಿ/ಡಿ) ಇದುವರೆಗೂ ಸಲ್ಲಿಸುತ್ತಿದ್ದ ಮಾರ್ಚ್ -31 ಕ್ಕೆ ಅಂತ್ಯಗೊಳ್ಳುವ ಪ್ರತಿ 12 ತಿಂಗಳಿಗೊಮ್ಮೆ ಎನ್ನುವುದಕ್ಕೆ ಬದಲಾಗಿ ಇನ್ನು ಮುಂದೆ ಡಿಸೆಂಬರ್ -31ಕ್ಕೆ ಅಂತ್ಯಗೊಳ್ಳುವ ಪ್ರತಿ 12 ತಿಂಗಳಿಗೊಮ್ಮೆ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಮೇಲಾಧಿಕಾರಿಗಳಿಗೆ ಸಲ್ಲಿಸಲು ತಿಳಿಸಿರುವುದರಿಂದ 2020-21(ಏಪ್ರಿಲ್-2020ರಿಂದ ಮಾರ್ಚ್-2021) ಹಾಗೂ 2021ರ (ಜನವರಿ-2021ರಿಂದ ಡಿಸೆಂಬರ್-2021ರವರೆಗೆ) ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

ಪ್ರಾಂಶುಪಾಲರು(ಸರ್ಕಾರಿ ಪಾಲಿಟೆಕ್ನಿಕ್/ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ)

ಪ್ರತಿ:

ಇ-ಆಡಳಿತ ವಿಭಾಗಕ್ಕೆ (ಅಂತರ್ಜಾಲದಲ್ಲಿ ಪ್ರಚುರಪಡಿಸಿಲು).